


# ಗಂಧದಗುಡಿಯ ಚೆನ್ನದ ನೆನಪುಗಳು

■ ಸುಮಲತಾ ಎನ್‌.

ಪುನೀತ್ ರಾಜ್‌ಕುಮಾರ್ ನಟನೆಯ 'ಗಂಧದಗುಡಿ' ಡಾಕ್ಯುಡ್ರಾಮಾದ ಛಾಯಾಗ್ರಹಣ ಸಿನಿಮಾಟೊಗ್ರಫರ್ ಪ್ರತೀಕ್ ಶೆಟ್ಟಿ ಅವರದ್ದು. ನಾಗರಹೊಳೆಯಿಂದ ಕಾಳಿ ನದಿ ಮೂಲದವರೆಗೂ ಅಪ್ಪು ಜೊತೆ ಪಯಣಿಸುತ್ತಾ, ಪ್ರೇಕ್ಷಕರನ್ನೂ ಜೊತೆಜೊತೆಗೆ ಕರೆದುಕೊಂಡು ಹೋಗುವ ಈ ಚಿತ್ರದಲ್ಲಿ ಪ್ರತೀಕ್ ಸೃಜನಶೀಲತೆಯ ಪಾತ್ರ ಹೆಚ್ಚಿದೆ.

'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ', 'ಹೀರೋ', '777 ಚಾರ್ಲಿ' ಹಾಗೂ 'ಕಾಂತಾರ' ಸಿನಿಮಾಗಳಲ್ಲಿ ಸಂಕಲನಕಾರರಾಗಿ ಕೆಲಸ ಮಾಡಿರುವ ಮಂಗಳೂರಿನ ಅವರು, 'ಗಂಧದಗುಡಿ'ಯಲ್ಲಿ ಮೊದಲ ಬಾರಿ ಡೈರೆಕ್ಟರ್ ಆಫ್ ಫೋಟೊಗ್ರಫರ್ ಹಾಗೂ ಸಂಕಲನ – ಎರಡೂ ಜವಾಬ್ದಾರಿ ನಿಭಾಯಿಸಿದ್ದಾರೆ. 'ಗಂಧದಗುಡಿ' ಚಿತ್ರೀಕರಣದ ಅನುಭವಗಳನ್ನು, ಪುನೀತ್ ಅವರೊಂದಿಗಿನ ನೆನಪುಗಳನ್ನು 'ಸುಧಾ' ಜೊತೆ ಹಂಚಿಕೊಂಡಿದ್ದಾರೆ.

◆ **'ಗಂಧದಗುಡಿ' ಸಿನಿಮಾಟೊಗ್ರಫಿ ಅವಕಾಶ ದೊರೆತದ್ದು ಹೇಗೆ?**

'ಗಂಧದಗುಡಿ' ಡಾಕ್ಯುಡ್ರಾಮಾ ನಿರ್ದೇಶಕ ಅಮೋಘವರ್ಷ ಅವರೊಂದಿಗೆ ಏಳು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಅವರ ಹಲವು ಪ್ರಾಜೆಕ್ಟ್‌ಗಳಲ್ಲಿ ಸಿನಿಮಾಟೋಗ್ರಫರ್ ಆಗಿ ಕೆಲಸ ಮಾಡಿರುವೆ. ಆ ಒಡನಾಟದಿಂದಾಗಿ 'ಗಂಧದಗುಡಿ' ಸಿನಿಮಾಟೊಗ್ರಫಿ ಅವಕಾಶವನ್ನು ನನ್ನ ಮುಂದೆ ಇಟ್ಟರು. ಈ ಡಾಕ್ಯುಮೆಂಟರಿ ಪುನೀತ್ ಅವರದ್ದು ಎಂದಾಗ ಖುಷಿ, ಭಯ ಒಟ್ಟೊಟ್ಟಿಗೇ ಆಗಿತ್ತು. ಜೊತೆಗೆ ಇಂಥ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳಬೇಕೆಂಬ ಹುಮ್ಮಸ್ಸು ಹೆಚ್ಚಿತ್ತು.

◆ **ಅಪ್ಪು ಅವರಿಗೆ ಕ್ಯಾಮೆರಾ ಹಿಡಿದ ಅನುಭವ ಹೇಗಿತ್ತು?**

ಅಪ್ಪು ಅವರ ಸಿನಿಮಾವನ್ನು, ಅವರ ನೃತ್ಯವನ್ನು ನೋಡಿ ಬೆಳೆದವನು ನಾನು. ಹೀಗಿದ್ದಾಗ ಅವರಿಗೇ ಕ್ಯಾಮೆರಾ ಹಿಡಿಯುವ ಅವಕಾಶಕ್ಕಿಂತ ಅದೃಷ್ಟ ಬೇರೆ ಇಲ್ಲ ಎನ್ನಬಹುದು. ಮೊದಲು, ಅಷ್ಟು ದೊಡ್ಡ ಸ್ಟಾರ್ ನಟರೊಂದಿಗೆ ಹೇಗೆ ಕೆಲಸ ಮಾಡುವುದು ಎಂದು ಭಯವಾಗಿತ್ತು. ಮೊದಲ ದಿನವೇ ಅವರು ಒಂದು ರೀತಿ ಕಂಫರ್ಟ್ ಎನ್ನುವಂಥ ವಾತಾವರಣ ಸೃಷ್ಟಿಸಿಬಿಟ್ಟರು. ಹಾಗಾಗಿ ಶೂಟಿಂಗ್ ಎಲ್ಲವೂ ಸುಲಭವಾಗಿ ಸಾಗಿತು. ನನಗೆ ಇದು ಒಂದು ರೀತಿ ಪ್ರಯೋಗಾತ್ಮಕ ಪ್ರಾಜೆಕ್ಟ್ ಕೂಡ ಆಗಿತ್ತು. ಸವಾಲುಗಳ ನಡುವೆಯೇ ಕರ್ನಾಟಕವನ್ನು ಸುಂದರವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದೆ.

◆ **ಇತರೆ ಸಿನಿಮಾಗಳಿಗೂ, 'ಗಂಧದಗುಡಿ' ಡಾಕ್ಯುಡ್ರಾಮಾಗೂ ಸಿನಿಮಾಟೊಗ್ರಫಿ ಹೇಗೆ ಭಿನ್ನ?**

ಈ ಡಾಕ್ಯುಡ್ರಾಮಾ ನೈಜ ಅನುಭವ ನೀಡಬೇಕಾದ್ದರಿಂದ ಭಿನ್ನ ಧಾಟಿಯಲ್ಲಿ ಸಾಗಬೇಕಿತ್ತು. ಸಾಮಾನ್ಯವಾಗಿ ಸಿನಿಮಾ ಶೂಟಿಂಗ್ ಸೆಟ್‌ನಲ್ಲಿ 20–30 ಮಂದಿ ಇರುತ್ತಾರೆ. ಈ ಶೂಟಿಂಗ್‌ನಲ್ಲಿ ಹಾಗಿರಲಿಲ್ಲ. ಕಾಡಿನಲ್ಲಿ ಶೂಟಿಂಗ್ ಆದ್ದರಿಂದ ಕಡಿಮೆ ಮಂದಿಯಷ್ಟೇ ಇರಬೇಕಿತ್ತು. ವನ್ಯಜೀವಿಗಳಿಗೆ ನಮ್ಮಿಂದ ಸ್ವಲ್ಪ ಕಿರಿಕಿರಿಯಾದರೂ ನಮಗೆ ಶೂಟ್ ಮಾಡಲು ಏನೂ ಸಿಗುತ್ತಿರಲಿಲ್ಲ. ಕೆಲವು ಸ್ಥಳಗಳಲ್ಲಿ ಜೀಪ್‌ನಿಂದ ಇಳಿಯುವ ಹಾಗೇ ಇರಲಿಲ್ಲ. ಕಡಿಮೆ ಜನರೊಂದಿಗೆ ಹೆಚ್ಚು ಕೆಲಸವನ್ನು ಕ್ರಿಯಾಶೀಲವಾಗಿ ಮಾಡಿದ್ದೇ ಭಿನ್ನ ಅನುಭವ ತಂದುಕೊಟ್ಟಿತು.

ಸಿನಿಮಾದಲ್ಲಿ ಒಂದು ಶಾಟ್ ಕಂಪೋಸ್ ಮಾಡಲು ಸಮಯ ಇರುತ್ತದೆ. ಎಷ್ಟು ಸಲ ಬೇಕಾದರೂ ರೀಟೇಕ್ ಮಾಡಬಹುದು. ಇಲ್ಲಿ ಏನೇ ಮಾಡಿದರೂ ಮೊದಲ ಶಾಟ್‌ನಲ್ಲೇ ಶೇ. 100ರಷ್ಟು ಸರಿಯಾಗಿರಬೇಕು. ಇದು ಬಹುದೊಡ್ಡ ಸವಾಲಾಗಿತ್ತು.

◆ **ಶೂಟಿಂಗ್ ಮಾಡುವಾಗ ಎದುರಾದ ಸವಾಲುಗಳೇನು?**

ಕರ್ನಾಟಕದ ಸುಂದರ ಸ್ಥಳಗಳನ್ನು ಅಷ್ಟೇ ಸುಂದರವಾಗಿ ಪ್ರೇಕ್ಷಕರಿಗೆ ಕಟ್ಟಿಕೊಡಬೇಕು ಎಂಬುದು ಈ ಡಾಕ್ಯುಮೆಂಟರಿಯ ಮೊದಲ ಸವಾಲು. ಪ್ರತಿ ಕಾಡಿನಲ್ಲೂ ಅದರದ್ದೇ ಆದ ಸವಾಲುಗಳು ಇರುತ್ತಿದ್ದವು. ಕಾಡಿಗೆ ತಕ್ಕಂತೆ ನಾವು ನಡೆದುಕೊಳ್ಳಬೇಕು. ಇಡೀ ಚಿತ್ರವನ್ನು ನೈಜ ಬೆಳಕಿನಲ್ಲಿ, ಅಂದರೆ ಗೋಲ್ಡನ್ ಲೈಟ್‌ನಲ್ಲಿ ಶೂಟ್ ಮಾಡಬೇಕೆಂದು ಮೊದಲೇ ನಿರ್ಧರಿಸಿದ್ದೆವು. ಕಾಡಿನಲ್ಲಿ ಶೂಟ್ ಮಾಡುವಾಗ ಪ್ರತಿಯೊಂದಕ್ಕೂ ಬೆಳಕಿನ ವ್ಯವಸ್ಥೆ ಮಾಡಲು ಸಾಧ್ಯವಾಗುವುದಿಲ್ಲ, ಜೊತೆಗೆ ಸಮಯವಿರುವುದಿಲ್ಲ. ಹೀಗಾಗಿ ಬೆಳಕು

